# ಮೈಸೂರು ಮಹಾನಗರ ಪಾಲಿಕೆ

**ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ ಸಭೆಯ ನಡವಳಿ, ಮೈಸೂರು.**

ಸಭೆಯ ದಿನಾಂಕ : 21.04.2010.
ಸಭೆಯ ವೇಳೆ : ಬೆಳಿಗ್ಗೆ 9.00 ಕ್ಕೆ
ಅಧ್ಯಕ್ಷತೆ : ಮಾನ್ಯ ಜಿಲ್ಲಾಧಿಕಾರಿಗಳು, ಹಾಗೂ ವಿಶೇಷಾಧಿಕಾರಿಗಳು ಜೆಎನ್‌ನರ್ಮ್, ಮೈಸೂರು ಜಿಲ್ಲೆ, ಮೈಸೂರು.

| ಕ್ರ. ಸಂ. | ಹಾಜರಿದ್ದವರು | ಕ್ರ. ಸಂ. | ಹಾಜರಿದ್ದವರು |
|---|---|---|---|
| 1. | ಶ್ರೀ ಪುರುಷೋತ್ತಮ್, ಮಾನ್ಯಮಹಾಪೌರರು, ಮೈನಪಾ | 18. | ಶ್ರೀ ಎಂ.ವಿ. ಶ್ರೀಧರ್, ಸಕಾಇಂ, ನರ್ಮ್ |
| 2. | ಶ್ರೀ ಜಯಣ್ಣ, ಆಯುಕ್ತರು, ಮೂಡಾ | 19. | ಶ್ರೀ ಎನ್. ಮಹದೇವಸ್ವಾಮಿ, ರಿಸರ್ಚ್ ಆಫಿಸರ್, ಕೆ.ಎಸ್.ಸಿ.ಬಿ |
| 3. | ಶ್ರೀ ಬಿ.ಕೆ. ಸುರೇಶ್‌ಬಾಬು, ಅಇಂ, ನರ್ಮ್, ಮೈನಪಾ | 20. | ಶ್ರೀ ಜಾದವ್, ಸಕಾಇಂ, ಕೆ.ಎಸ್.ಸಿ.ಬಿ |
| 4. | ಶ್ರೀ ಕೆ.ಪಿ ಶಿವಕುಮಾರ್ ಅಇಂ, ಮೂಡಾ | 21. | ಶ್ರಿ ರಾಮಚಂದ್ರಯ್ಯ, ಸಕಾಇಂ, ಕೆ.ಯು.ಡಬ್ಲ್ಯೂ.ಎಸ್&ಡಿಬಿ |
| 5. | ಶ್ರೀ ಸುಬ್ಬೇಗೌಡ, ಕಾಅ, ಕೆ.ಯು.ಡಬ್ಲ್ಯೂ.ಎಸ್ & ಡಿಬಿ | 22. | ಶ್ರೀ ಪರಶಿವ ಮೂರ್ತಿ, ಸಕಾಇಂ, ವಿವಿಡಬ್ಲ್ಯೂಡಬ್ಲ್ಯೂ |
| 6. | ಶ್ರೀ ನಾಗರಾಜ್ ಮೂರ್ತಿ, ಕಾಅ, ಕೆ.ಎಸ್.ಆರ್.ಟಿ.ಸಿ | 23. | ಡಾ॥ ಗೋರಖ್‌ನಾಥ್, ಎಂ.ಆರ್&ಟಿ, ಕೋ-ಆರ್ಡಿನೇಟರ್, ಕೆಎಸ್‌ಸಿಬಿ |
| 7. | ಶ್ರೀ ಬಿ.ಎಲ್. ಭೈರಪ್ಪ, ನಗರಪಾಲಿಕೆ ಸದಸ್ಯರು, ಜಿಲ್ಲಾ ಯೋಜನಾ ಸಮಿತಿ ಸದಸ್ಯರು. | 24. | ಶ್ರೀ ಶರತ್ ಹೆಚ್.ಎಸ್.ಐ.ಟಿ. ಆಫಿಸರ್, ಜೆಎನ್‌ನರ್ಮ್ |
| 8. | ಶ್ರೀ ಶ್ರೀಕಂತಯ್ಯ, ನಗರಪಾಲಿಕೆ ಸದಸ್ಯರು ಮತ್ತು ಜಿಲ್ಲಾ ಯೋಜನಾ ಸಮಿತಿ ಸದಸ್ಯರು. | 25. | ಶ್ರೀ ಚಿದಂಬರ್ ಬಿ.ಎಸ್, ಪಿ.ಹೆಚ್.ಇ., ನರ್ಮ್ |
| 9. | ಶ್ರೀ ಟಿ. ದೇವರಾಜ್, ನಗರಪಾಲಿಕೆ ಸದಸ್ಯರು, ಮೈನಪಾ | 26. | ಶ್ರೀ ಕುಮಾರ್, ಸದಸ್ಯರು, ತಾಂತ್ರಿಕ ಸಮಿತಿ ಮತ್ತು ಸಿಟಿಜನ್ ಕಮಿಟಿ, ಮೈನಪಾ |
| 10. | ಶ್ರೀ ಡಿ. ಪದ್ಮನಾಭ್, ಚೇರ್‌ಮನ್, ಜಿಲ್ಲಾ ಯೋಜನಾ ಸಮಿತಿ ಸದಸ್ಯರು. | 27. | ಶ್ರೀ ಡಿ. ಮಲ್ಲಿಕಾರ್ಜುನ ಪ್ರಾಜೆಕ್ಟ್ ಡೈರೆಕ್ಟರ್, ಮೆ॥ ಎನ್.ಸಿ.ಸಿ.ಎಲ್ |
| 11. | ಶ್ರೀ ಎ.ಎನ್. ಪ್ರಸಾದ್, ಸಕಾಇಂ, ಮೈನಪಾ | 28. | ಶ್ರೀ ಮೃತ್ಯೂಂಜಯ್, ಪ್ರಾಜೆಕ್ಟ್ ಮ್ಯಾನೇಜರ್, ಮೆ॥ ಎನ್.ಸಿ.ಸಿ.ಎಲ್ |
| 12. | ಶ್ರೀ ಎಂ. ಬಸವರಾಜು, ಸಕಾಇಂ, ನರ್ಮ್ | 29. | ಶ್ರೀ ಘೋಷ್, ಮುಖ್ಯಸ್ಥರು, (O&M) ಜಸ್ಕೋ |
| 13. | ಶ್ರೀ ರಾಮಕೃಷ್ಣ, ಸಕಾಇಂ, ಮೈನಪಾ | 30. | ಶ್ರೀ ಪುರೋಹಿತ್, ಮುಖ್ಯಸ್ಥರು, (Contracts) ಜಸ್ಕೋ |
| 14. | ಶ್ರೀ ನರಸಿಂಹಮೂರ್ತಿ, ಸಕಾಇಂ, ನರ್ಮ್ | 31. | ಶ್ರೀ ಶಿವಕುಮಾರ್, ಪ್ರಾಜೆಕ್ಟ್ ಮ್ಯಾನೇಜರ್, ಮೆ॥ ಪ್ರತ್ಯೂಷ ಅಸೋಸಿಯೇಷನ್ಸ್ |
| 15. | ಶ್ರೀ ರಾಘವೇಂದ್ರ, ಸಕಾಇಂ, ಮೈನಪಾ | 32. | ಶ್ರೀ ಯು.ವಿ.ಆರ್ ಅಂಜನೇಯುಲು, ಪ್ರಾಜೆಕ್ಟ್ ಮ್ಯಾನೈಜರ್, ಮೆ॥ ಆರ್.ಎಂಎನ್ ಇನ್ಫ್ರಾಸ್ಟ್ರಕ್ಚರ್ ಲಿ. |
| 16. | ಶ್ರೀ ಗೋವಿಂದರಾಜು, ಸಕಾಇಂ, ನರ್ಮ್ | 33. | ಶ್ರೀ ಮಧುಕರ್, ರೆಪ್ರೆಸೆಂಟೇಟಿವ್ ಹಾರ್ಸ್ ರಿವೈವಲ್ ಪ್ರಾಜೆಕ್ಟ್ |
| 17. | ಶ್ರೀ ತಿಯಂಬಕಾ, ಸಕಾಇಂ, ಮೂಡಾ | 34. | ಶ್ರಿ ಎ. ರಾಮಬ್ರಹ್ಮಮ್, ಸಹಾಯಕ ಜನರಲ್ ಮ್ಯಾನೇಜರ್, ಪಿಎಎಸ್‌ಪಿಎಲ್. |

ಹಿಂದಿನ ಸಭೆಯ ದಿನಾಂಕ : 7/04/09
ಮುಂದಿನ ಸಭೆಯ ದಿನಾಂಕ : 05/05/10
ಮುಂದಿನ ಸಭೆಯ ವೇಳೆ : ಬೆಳಿಗ್ಗೆ 9.00 ಗಂಟೆಗೆ
ಮುಂದಿನ ಸಭೆಯ ಸ್ಥಳ : ಎಂ.ಸಿ.ಸಿ ಸಭೆಯ ಸಭಾಂಗಣ, ಮೈಸೂರು
ತಯಾರಿಸಿದವರು : ಶ್ರೀ ಬಿ.ಕೆ. ಸುರೇಶ್‌ಬಾಬು, ಅಧೀಕ್ಷಕ ಇಂಜಿನಿಯರ್ (ನರ್ಮ್)
ಕಳುಹಿಸಿರುವುದು : ಶ್ರೀ ಬಿ.ಕೆ. ಸುರೇಶ್‌ಬಾಬು, ಅಧೀಕ್ಷಕ ಇಂಜಿನಿಯರ್ (ನರ್ಮ್)

ಅಧೀಕ್ಷಕ ಅಭಿಯಂತರು, ನರ್ಮ್, ಇವರು ಪೂಜ್ಯ ಮಹಾಪೌರರು, ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಾಧಿಕಾರಿಗಳು ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, ನಗರಪಾಲಿಕೆ ಸದಸ್ಯರು, ಹಾಗೂ ಎಲ್ಲಾ ಅಧಿಕಾರಿಗಳು, ಗುತ್ತಿಗೆದಾರರು, ಮಾಧ್ಯಮ ಪ್ರತಿನಿಧಿಗಳು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಾಧಿಕಾರಿಗಳು, ಮತ್ತು ನರ್ಮ್ ವಿಶೇಷಾಧಿಕಾರಿಗಳು, ಇವರು ಸಭೆಯ ಅಧ್ಯಕ್ಷತೆ ವಹಿಸಿ ಕಾಮಗಾರಿಗಳ ಪ್ರಗತಿಯನ್ನು ಈ ಕೆಳಕಂಡಂತೆ ಅವಲೋಕಿಸಿದರು.

ನರ್ಮ್ ಯೋಜನೆಯಡಿ ಕೈಗೆತ್ತಿಕೊಂಡಿರುವ ಎಲ್ಲಾ ಕಾಮಗಾರಿಗಳ ಪ್ರಗತಿಯು ನಿಗಧಿತ ಗುರಿಗೆ ಹಾಗೂ ಕಾರ್ಯಕ್ರಮಕ್ಕೆ ಅನುಗುಣವಾಗಿರುತ್ತದೆ. 15ನೇ ಏಪ್ರಿಲ್ 2010 ದ ಅಂತ್ಯಕ್ಕೆ ನರ್ಮ್ ಯೋಜನೆಯ ಒಟ್ಟು ಆರ್ಥಿಕ ಪ್ರಗತಿ, ರೂ. 348.41 ಕೋಟಿಗಳ ಗುರಿಗೆ ಎದುರಾಗಿ ರೂ. 352.96 ಕೋಟಿಗಳಾಗಿರುತ್ತದೆ.

| ಕ್ರ ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| 1 | ಮೈಸೂರು ನಗರದಲ್ಲಿ ನೀರು ಸರಬರಾಜು ನೆಟ್‌ವರ್ಕ್‌ನ ರೀಮಾಡಲ್ಲಿಂಗ್, ಸಿಸ್ಟಮ್ ಆಟೋಮೇಷನ್ ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆ ಒದಗಿಸುವ ಯೋಜನೆ: ಯೋಜನಾ ಅಂದಾಜು ಮೊತ್ತ ರೂ.65.56 ಕೋಟಿಗಳು ಯೋಜನಾ ಮುಕ್ತಾಯ ದಿನಾಂಕ:ಜನವರಿ-2010 | ಮಾರ್ಚ್ 2010ರ ಅಂತ್ಯಕ್ಕೆ ರೂ. 78.64 ಕೋಟಿಗಳ ಎದುರಾಗಿ ರೂ. 80.24 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು.<br><br>ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ<br><br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 52.17ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ತಿಳಿಸಿದರು. 54.27 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಗುನಿಟಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 41.34 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆಯೆಂದು ತಿಳಿಸಲಾಯಿತು.<br><br>ಜರ್ಮನ್ ಪ್ರೆಸ್‌ನಿಂದ ಬಲ್ಲಾಳ್ ವೃತ್ತದವರೆಗೆ 9 ಪರೀಕ್ಷಾ ಬಿಂದುಗಳಿದ್ದು ಈ ಸ್ಥಳಗಳಲ್ಲಿ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆಯೆಂದು ಕಾರ್ಯಪಾಲಕ ಇಂಜಿನಿಯರ್ ಕೆಯುಡಬ್ಲ್ಯೂಎಸ್&ಡಿಬಿ ಯವರು ತಿಳಿಸಿದರು. ಈ ಸ್ಥಳಗಳಲ್ಲಿ ಕಾಮಗಾರಿಯನ್ನು ಸಮರೋಪಾದಿಯಲ್ಲಿ ಕೈಗೆತ್ತಿಕೊಂಡು ತ್ವರಿತವಾಗಿ ಪೂರ್ಣಗೊಳಿಸುವುದಾಗಿ ತಿಳಿಸಿದರು.<br><br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 22.73 ಕಿ.ಮೀ | ಏಪ್ರಿಲ್ 15, 2010ರ ಅಂತ್ಯಕ್ಕೆ ನಿಗಧಿತ ಗುರಿಯಾದ ರೂ. 84.14 ಕೋಟಿಗಳ ಎದುರಾಗಿ ರೂ. 84.30 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು.<br><br>ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ.<br><br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 52.92 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ತಿಳಿಸಿದರು. 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಗುನಿಟಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 42.06 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆಯೆಂದು ತಿಳಿಸಲಾಯಿತು.<br><br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 22.73 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 11.58 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆಯೆಂದು ತಿಳಿಸಲಾಯಿತು.<br><br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು ಮುಕ್ತಾಯದ ಹಂತದಲ್ಲಿರುತ್ತದೆ. 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳಲ್ಲಿ 4 ಟ್ಯಾಂಕುಗಳ ಹೈಡ್ರಾಲಿಕ ಟೆಸ್ಟಿಂಗ್ ಪೂರ್ಣಗೊಂಡಿರುತ್ತದೆ ಮತ್ತು 5 ಟ್ಯಾಂಕುಗಳ ಹೈಡ್ರಾಲಿಕ ಟೆಸ್ಟಿಂಗ್ | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 11.19 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆಯೆಂದು ತಿಳಿಸಲಾಯಿತು.<br><br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು ಮುಕ್ತಾಯದ ಹಂತದಲ್ಲಿರುತ್ತದೆ. ಟಿಪ್ಪು ಪಾರ್ಕ್‌ನಲ್ಲಿರುವ ಶೇಖರಣಾ ಟ್ಯಾಂಕ್ ಕಾಮಗಾರಿಯು ಪೂರ್ಣವಾಗಿದ್ದು, ಹೈಡ್ರಾಲಿಕ್ ಪರೀಕ್ಷೆ ನಡೆಯುತ್ತಿದೆಯೆಂದು ತಿಳಿಸಿದರು..<br><br>ದತ್ತನಗರ ಜಿ.ಎಸ್.ಎಲ್.ಆರ್ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು ಮೇ ಮೊದಲ ವಾರದಲ್ಲಿ ಕಾರ್ಯಗತಗೊಳಿಸಲಾಗುವುದೆಂದು ಕಾರ್ಯಪಾಲಕ ಅಭಿಯಂತರರು ಕೆಯುಡಬ್ಲುಎಸ್ & ಡಿಬಿ ಇವರು ತಿಳಿಸಿದರು.<br><br>ಹಿಂದಿನ ಸಭೆಯಲ್ಲಿ ತಿಳಿಸಿದಂತೆ, ಕೆಲಸಗಾರರಿಗೆ ಸುರಕ್ಷಾ ವಿಧಾನಗಳ ಬಗ್ಗೆ ತರಬೇತಿ ಕ್ಯಾಂಪ್‌ಅನ್ನು 21ನೇ ಮಾರ್ಚ್ 2010ರಂದು ನಡೆಸಲಾಗಿದೆಯೆಂದು ಕಾರ್ಯಪಾಲಕ ಅಭಿಯಂತರರು ಕೆಯುಡಬ್ಲುಎಸ್ & ಡಿಬಿ ಇವರು ಹೇಳಿದರು. | ಪ್ರಗತಿಯಲ್ಲಿರುತ್ತದೆ. 8 ಟ್ಯಾಂಕುಗಳ ಗಿಲಾವು ಕಾಮಗಾರಿ ಪೂರ್ಣಗೊಂಡಿದ್ದು, ಹೈಡ್ರಾಲಿಕ ಟೆಸ್ಟಿಂಗ್‌ನ್ನು ಸಧ್ಯದಲ್ಲಿ ಮಾಡಲಾಗುವುದು.<br><br>ಹಿಂದಿನ ಸಭೆಯಲ್ಲಿ ನಿರ್ಧರಿಸಿದಂತೆ ದತ್ತನಗರದ ಜಿ.ಎಸ್.ಎಲ್.ಆರ್ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು ಮೇ ಮೊದಲ ವಾರದಲ್ಲಿ ಕಾರ್ಯಗತಗೊಳಿಸಲಾಗುವುದೆಂದು ಕಾರ್ಯಪಾಲಕ ಅಭಿಯಂತರರು ಕೆಯುಡಬ್ಲುಎಸ್ & ಡಿಬಿ ಇವರು ತಿಳಿಸಿದರು. | |
| 2. | ಸ್ಕಾಡಾ ಯೋಜನೆ: ಅಂದಾಜು ಮೊತ್ತ: ರೂ. 5.24 ಕೋಟಿ<br>Agency: M/s. Mechatronics<br>ಅವಧಿ: 9 ತಿಂಗಳು<br>ಮುಕ್ತಾಯವಾಗಬೇಕಾದುದು: ಜುಲೈ-2009 | ಹೊಂಗಳ್ಳಿ 3ನೇ ಹಂತವನ್ನು ಕಾರ್ಯಗತಗೊಳಿಸಲಾಗುವುದೆಂದು ಮತ್ತು ಎಲೆಕ್ಟ್ರಿಕ್ ಫ್ಲೋ ಮೀಟರ್ ಅಳವಡಿಸಲು ಒಂದು ದಿನ ವಿದ್ಯುತ್ ಸ್ಥಗಿತಗೊಳಿಸಬೇಕಾಗುತ್ತದೆ ಎಂದು ಕಾರ್ಯಪಾಲಕ ಅಭಿಯಂತರರು ಕೆಯುಡಬ್ಲ್ಯುಎಸ್&ಡಿಬಿ ಯವರು ತಿಳಿಸಿದರು.<br><br>ಉತ್ತರವಾಗಿ ಅಧೀಕ್ಷಕ ಅಭಿಯಂತರರು ಈ ಕಾರ್ಯವನ್ನು ಬೇಸಿಗೆಯ ನಂತರ ಮಾಡಬಹುದು ಎಂದರು. ಅಥವಾ ಕೆಪಿಟಿಸಿಎಲ್ ರವರನ್ನು ಸಂಪರ್ಕಿಸಿ ವಿದ್ಯುತ್ ಕಡಿತದ ಸಂದರ್ಭದಲ್ಲಿ ಈ ಕಾರ್ಯವನ್ನು ಮಾಡಲು ತಿಳಿಸಿದರು. | – | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| 3. | 24x7 ನೀರು ಸರಬರಾಜು ಪಶ್ಚಿಮ ವಲಯ: ಅಂದಾಜುಮೊತ್ತ 56.07 ಕೋಟಿ ರೂ. ಸಿಎಸ್‌ಆರ್, ಕುವೆಂಪುನಗರ ಹೆಚ್.ಎಲ್.ಆರ್ ವಲಯದ ಭಾಗಶ: ವಲಯಗಳು ಮತ್ತು ಪೂರ್ವವಲಯ ಹೆಚ್.ಎಲ್.ಆರ್ ವಲಯದ ಭಾಗಶ: ಅಂದಾಜುಮೊತ್ತ 45.84 ಕೋಟಿ ರೂ. ಜರ್ಮನ್ ಪ್ರೆಸ್, ದೇವನೂರು, ಬಳ್ಳಾಲ್ ವೃತ್ತ ವಲಯಗಳು ಮತ್ತು ಹೆಚ್.ಎಲ್.ಆರ್ ವಲಯದ ಭಾಗಶ:<br><br>ಮುಕ್ತಾಯವಾಗಬೇಕಾದುದು: Jan-2013 | ಸಭೆಯಲ್ಲಿ ಹಾಜರಿದ್ದ ಎಲ್ಲಾ ನಗರ ಪಾಲಿಕೆ ಸದಸ್ಯರು ಜಸ್ಕೋದವರಿಂದ ನೀರಿನ ವಿತರಣೆಯ ಬಗ್ಗೆ ಅಸಮಧಾನ ವ್ಯಕ್ತಪಡಿಸಿದರು. ವಾಣಿವಿಲಾಸ್‌ವಾಟರ್ ವರ್ಕ್ಸ್ ಮತ್ತು ಜಸ್ಕೋರವರ ನಡುವೆ ಸರಿಯಾದ ಹೊಂದಾಣಿಕೆ ಇರುವುದಿಲ್ಲವೆಂದು ತಿಳಿಸಿದರು.<br><br>ಶ್ರೀ ಭೈರಪ್ಪ, ಪಾಲಿಕೆ ಸದಸ್ಯರು ಜೆ.ಪಿ ನಗರದ ಭಾಗದಲ್ಲಿ ಸರಿಯಾಗಿ ನೀರು ಸರಬರಾಜು ಆಗುತ್ತಿಲ್ಲವೆಂದು ತಿಳಿಸಿದರು. ಕಾರ್ಯಪಾಲಕ ಇಂಜಿನಿಯರ್ ವಾಣಿವಿಲಾಸ್ ವಾಟರ್ ವರ್ಕ್ಸ್ ಇವರಿಗೆ ಇದನ್ನು ಖುದ್ದಾಗಿ ಭೇಟಿ ನೀಡಿ ತೊಂದರೆಯನ್ನು ಬಗೆಹರಿಸುವಂತೆ ಸೂಚಿಸಲಾಯಿತು.<br><br>ಎಲ್ಲಾ ವಾಲ್ವ್ ಮೆನ್ ಮತ್ತು ವಾಟರ್ ಇನ್ಸ್‌ಪೆಕ್ಟರ್‌ಗಳಿಗೆ ದಕ್ಷತೆಯಿಂದ ಹಾಗೂ ಎಚ್ಚರದಿಂದ ಕಾರ್ಯ ನಿರ್ವಹಿಸುವಂತೆ ಸೂಚಿಸಲು ತಿಳಿಸಿಲಾಯಿತು. ಮತ್ತು ಈ ಬಗ್ಗೆ ಯಾವುದೇ ತಪ್ಪು ಉಂಟಾದಲ್ಲಿ ಅದರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಯಿತು.<br><br>ಶ್ರೀ ಶಿವಣ್ಣ ನಗರಪಾಲಿಕೆ ಸದಸ್ಯರು ಇವರು ಜಸ್ಕೋದವರು ದೂರುಗಳನ್ನು ಬಗೆಹರಿಸಲು ಸರಿಯಾಗಿ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ತಿಳಿಸಿದರು. ಹಲವಾರು ಬಾರಿ ತಿಳಿಸಿದಾಗಿಯೂ ಅವರ ವಾರ್ಡ್ ವ್ಯಾಪ್ತಿಯಲ್ಲಿ ಬೋರ್‌ವೆಲ್‌ಗಳನ್ನು ದುರಸ್ತಿ ಪಡಿಸಿಲ್ಲವೆಂದು ತಿಳಿಸಿದರು.<br><br>ಇದಕ್ಕೆ ಉತ್ತರವಾಗಿ ಜಸ್ಕೋದವರು ಎಲ್ಲಾ ದೂರುಗಳ ಬಗ್ಗೆ ಕ್ರಮ ವಹಿಸಲು ಪೂರ್ಣವಾಗಿ ಶ್ರಮಿಸಿರುವುದಾಗಿ ತಿಳಿಸಿದರು. ಮುಂದುವರಿದು ವಿ.ವಿ.ಮೊಹಲ್ಲಾ, ಯರಗನಹಳ್ಳಿ ಮತ್ತು ಜಲಪುರಿಯಲ್ಲಿ 3 ಜನರೇಟರ್ ಸ್ಟೇಷನ್‌ಗಳನ್ನು ಸ್ಥಾಪಿಸಿರುವುದಾಗಿ ಮತ್ತು 38 ಟ್ಯಾಂಕರ್‌ಗಳನ್ನು ನಿಯೋಜಿಸಲಾಗಿದ್ದು, ಹೆಚ್ಚುವರಿ 20 ಬೋರ್‌ವೆಲ್ ಪಂಪುಗಳ ವ್ಯವಸ್ಥೆ ಮಾಡಿರುವುದಾಗಿ ತಿಳಿಸಿದರು. 38 ಬೋರ್‌ವೆಲ್‌ಗಳನ್ನು ಫ್ಲೆಷಿಂಗ್ ಮಾಡಲು ಗುರುತಿಸಲಾಗಿದ್ದು ಮತ್ತು 4 ಜಾಗಗಳಲ್ಲಿ ಈಗಾಗಲೇ ಫ್ಲೆಷಿಂಗ್ ಮಾಡಲಾಗಿದೆ, ಈ ನಾಲ್ಕು ಜಾಗಗಳ ಫ್ಲಷಿಂಗ್ ವರದಿಯನ್ನು ಪರಿಶೀಲಿಸಿ ಉಳಿದ ಜಾಗಗಳಲ್ಲಿ ಫ್ಲಷಿಂಗ್ | ಜಸ್ಕೋದವರ ಕಾರ್ಯ ನಿರ್ವಹಣೆ ಬಗ್ಗೆ ಮಾನ್ಯ ಪೂಜ್ಯ ಮಹಾಪೌರರು ಅಸಮಧಾನವನ್ನು ವ್ಯಕ್ತ ಪಡಿಸಿದರು. ಜಸ್ಕೋದವರು ದೂರುಗಳ ಬಗ್ಗೆ ಸರಿಯಾಗಿ ಕ್ರಮ ತೆಗೆದುಕೊಳ್ಳದಿರುವ ಬಗ್ಗೆ ಸಾರ್ವಜನಿಕರು ಬೇಸರಗೊಂಡಿದ್ದು, ಈ ಬಗ್ಗೆ ಸಾರ್ವಜನಿಕರಿಂದ ತಮಗೆ ದೂರುಗಳು ಬರುತ್ತಿದೆಯೆಂದು ಪೂಜ್ಯ ಮಹಾಪೌರರು ತಿಳಿಸಿದರು. ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಯಾವುದೇ ಕ್ರಮಕ್ಕೆ ಆಸ್ಪದ ಕೊಡದಂತೆ ಸಾರ್ವಜನಿಕರ ದೂರುಗಳನ್ನು ತುರ್ತಾಗಿ ಬಗೆ ಹರಿಸುವಂತೆ ಜಸ್ಕೋ ಅಧಿಕಾರಿಗಳಿಗೆ ಸೂಚಿಸಲಾಯಿತು.<br><br>ಸಾರ್ವಜನಿಕರು ದೂರುಗಳನ್ನು ದಾಖಲಿಸಲು ಅನುಕೂಲವಾಗುವಂತೆ ಜಸ್ಕೋದವರು ದೂರವಾಣಿ ಸಂಖ್ಯೆಗಳನ್ನು ನಮೂದಿಸಿ ಕರಪತ್ರಗಳನ್ನು ಹಂಚಿದ್ದು, ಅದರಲ್ಲಿ ನಮೂದಿಸಿರುವ ದೂರವಾಣಿ ಸಂಖ್ಯೆ 0821–64556000 ಗೆ ಕರೆ ಮಾಡಿದಾಗ ಯಾವುದೇ ಉತ್ತರ ದೊರುಕುತ್ತಿಲ್ಲವೆಂದು ಇದರಿಂದ ಜಸ್ಕೋದವರು ಸಾರ್ವಜನಿಕರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆಂದು ಶ್ರೀ ಕುಮಾರ್, ಬೂತ್ ಕಮಿಟಿ ಲೀಡರ್ ಇವರು ತಿಳಿಸಿದರು.<br><br>ಮೇಲಿನ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಪರಿಕ್ಷಿಸಿದಾಗ ಕರೆಗೆ ಯಾವುದೇ ಪ್ರತಿಕ್ರಿಯೆ ಇಲ್ಲದಿರುವುದನ್ನು ಗಮನಿಸಲಾಯಿತು. ಜಸ್ಕೋದವರ ಈ ತಪ್ಪನ್ನು ಬಹಳ ಅಸಮಧಾನದಿಂದ ಗಮನಿಸಲಾಯಿತು. ದೂರವಾಣಿ ಕರೆಗೆ ಸ್ಪಂದಿಸದೆ ಇರುವುದಕ್ಕೆ ಸಂಬಂಧ ಪಟ್ಟ ಟೆಲಿಫೋನ್ ಆಪರೇಟರ್ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಯಿತು.<br><br>ಇದಕ್ಕೆ ಉತ್ತರವಾಗಿ ಶ್ರೀ ಘೋಷ್, ಮುಖ್ಯಸ್ಥರು (O&M) ಇವರು, ಶ್ರೀ ಟೋನಿ, ಟೆಲಿಫೋನ್ ಆಪರೇಟರ್ ಇವರನ್ನು ತಕ್ಷಣದಿಂದಲೇ ಈ ದಿನವೇ ವಜಾ ಮಾಡುವುದಾಗಿ ತಿಳಿಸಿದರು ಮತ್ತು ದೂರುಗಳನ್ನು ಸಂಗ್ರಹಿಸಲು ಕುಮಾರಿ ಹರಿಪ್ರಿಯ, ಇವರನ್ನು ಜವಾಬ್ದರರನ್ನಾಗಿ ಮಾಡಲಾಗಿದ್ದು, ಮುಂದೆ ಇಂತಹ ಪ್ರಕರಣಗಳು ಮರುಕಳಿಸಿದ್ದಲ್ಲಿ ಅವರನ್ನೂ ಸಹ ವಜಾ ಮಾಡಲಾಗುವುದೆಂದು ತಿಳಿಸಿದರು.<br><br>ಪ್ರತಿಷ್ಠಿತ ಕಂಪನಿಯಾದ ಟಾಟಾದ ಅಂಗ ಸಂಸ್ಥೆಯಾದ ಜಸ್ಕೋ ಕಂಪನಿಯು ದಕ್ಷತೆಯಿಂದ ಮತ್ತು ಪರಿಣಾಮಕಾರಿಯಾಗಿ | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಮಾಡಲಾಗುವುದು.<br>ದೂರುಗಳನ್ನು ಆದ್ಯತೆ ಮೇಲೆ ಕೈಗೆತ್ತಿಕೊಳ್ಳುವಂತೆ ಮತ್ತು ಎಲ್ಲಾ ದೂರುಗಳ ಬಗ್ಗೆ ಮುಂದಿನ ಸಭೆಯ ಒಳಗೆ ಕ್ರಮ ಕೈಗೊಂಡಿರಬೇಕಾಗಿ ಜಸ್ಕೋ ಅಧಿಕಾರಿಗಳಿಗೆ ಮಾನ್ಯ ಆಯುಕ್ತರವರು ತಿಳಿಸಿದರು.<br>ನೀರಿನ ಸಮಸ್ಯೆ ಬಗ್ಗೆ ಚರ್ಚಿಸಲು ಎಲ್ಲಾ ಪಾಲಿಕೆ ಸದಸ್ಯರು, ವಾಣಿವಿಲಾಸ್‌ವಾಟರ್ ವರ್ಕ್ಸ್ ಮತ್ತು ಕೆಯುಡಬ್ಲ್ಯೂಎಸ್&ಡಿಬಿ ಅಧಿಕಾರಿಗಳ ಜೊತೆಗೆ ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಒಂದು ಪ್ರತ್ಯೇಕವಾದ ಸಭೆಯನ್ನು ನಡೆಸಲು ನಿರ್ಧರಿಸಲಾಯಿತು. ಸಭೆಯನ್ನು ಆದಷ್ಟು ಬೇಗನೇ ವ್ಯವಸ್ಥೆ ಮಾಡಲು ಸೂಚಿಸಲಾಯಿತು. | ಕೆಲಸ ಕಾರ್ಯವನ್ನು ನಿರ್ವಹಿಸುತ್ತಿಲ್ಲವೆಂದು ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು ನರ್ಮ್ ಇವರು ತಿಳಿಸಿದರು. ಮುಂದೆ ಇಂತಹ ತಪ್ಪುಗಳನ್ನು ಗಮನಿಸಿದಲ್ಲಿ, ವಿಷಯವನ್ನು ಸರ್ಕಾರಕ್ಕೆ ಹಾಗೂ ಅವರ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸುವುದಾಗಿ ಜಸ್ಕೋದ ಸ್ಥಳೀಯ ಪ್ರತಿನಿಧಿಗಳಿಗೆ ಎಚ್ಚರಿಕೆ ನೀಡಿದರು. | |
| 4. | ಮೈಸೂರು ನಗರಕ್ಕೆ ಸಗಟು ನೀರು ಸರಬರಾಜನ್ನು ಕಬಿನಿ ನದಿಯಿಂದ ತರುವ ಯೋಜನೆ:<br>**ಯೋಜನೆಯ ಅಂದಾಜು ರೂ.** 108.81 ಕೋಟಿ<br>ಮುಕ್ತಾಯವಾಗಬೇಕಾದುದು<br>Jan-2012 | ಮಾರ್ಚ್ 2010ರ ಅಂತ್ಯದವರೆಗೆ ನಿಗಧಿಪಡಿಸಿದ್ದ ಗುರಿಯಾದ ರೂ. 30.41 ಕೋಟಿಗಳ ಎದುರಾಗಿ ರೂ. 34.85 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್ ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ತಿಳಿಸಿದರು.<br>ಇನ್‌ಟೇಕ್ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ ಹಾಗೂ ಕಾಮಗಾರಿಯನ್ನು ಮಳೆಗಾಲ ಪ್ರಾರಂಭವಾಗುವ ಮುಂಚೆ ಸುರಕ್ಷಾ ಹಂತಕ್ಕೆ ತರಲಾಗುವುದು ಎಂದು ಕಾರ್ಯಪಾಲಕ ಇಂಜಿನಿಯರ್ ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಯವರು ತಿಳಿಸಿದರು. ಭೂಸ್ವಾಧೀನ ಪ್ರಕರಣವು ಇತ್ಯರ್ಥವಾಗಿದ್ದು, ರೈತರು ಕಾಮಗಾರಿಯನ್ನು ನಿರ್ವಹಿಸಲು ಸಹಕರಿಸುತ್ತಿದ್ದಾರೆಂದು ತಿಳಿಸಿದರು. ರೈತರು ಭೂ ಪರಿಹಾರವನ್ನು ತುರ್ತಾಗಿ ನೀಡುವಂತೆ ಕೋರುತ್ತಿದ್ದಾರೆಂದು ತಿಳಿಸಿದರು.<br>ಕಬಿನಿ ಮತ್ತು ಕಾವೇರಿಯನ್ನು ಒಂದಕ್ಕೊಂದು ಸೇರಿಸಲಾಗುತ್ತಿದ್ದು ಯೋಜನೆಯಲ್ಲಿ ಅವಕಾಶ ಮಾಡಿದ್ದು ಮತ್ತು ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ನೀರಿನ ಸರಬರಾಜಿನ ಬಗ್ಗೆ ಮಾಡಿರುವ ವ್ಯವಸ್ಥೆ ಬಗ್ಗೆ ಶ್ರೀ ಲಕ್ಷ್ಮಣ್ ಸಂಚಾಲಕರು ವಿವರಣೆ ಕೋರಿದರು. ಇದಕ್ಕೆ ಉತ್ತರವಾಗಿ ಕಾವೇರಿ | ಏಪ್ರಿಲ್ 15, 2010ರ ಅಂತ್ಯಕ್ಕೆ ನಿಗಧಿತ ಗುರಿಯಾದ ರೂ. 32.34 ಕೋಟಿಗಳ ಎದುರಾಗಿ ರೂ. 35.38 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.<br>ಕಬಿನಿ ಯೋಜನೆಯಡಿಯಲ್ಲಿ ಕೇವಲ ಪೈಪ್ ಲೈನ್ ಹಾಕುವ ಕಾಮಗಾರಿಯನ್ನು ಮಾತ್ರ ನಿರ್ವಹಿಸಲಾಗುತ್ತಿದ್ದು, ಇದುವರೆವಿಗೂ ನೀರಿನ ಪರಿಶ್ಕರಣಾ ಘಟಕದ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲವೆಂದು ಶ್ರೀ ಭೈರಪ್ಪ, ಮಾಹನಗರ ಪಾಲಿಕೆ ಸದಸ್ಯರು, ಇವರು ತಿಳಿಸಿದರು. ಇದಕ್ಕೆ ಉತ್ತರವಾಗಿ ಕಾರ್ಯಪಾಲಕ ಇಂಜಿನಿಯರ್ ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಯವರು ಪರಿಶ್ಕರಣಾ ಘಟಕದ ಕಾಮಗಾರಿಯನ್ನು ಇತ್ತೀಚೆಗೆ ಪ್ರಾರಂಭಿಸಲಾಗಿದೆಯೆಂದು ತಿಳಿಸಿದರು. ಈ ಸಂಬಂಧ ಮಾನ್ಯ ಪೂಜ್ಯ ಮಹಾಪೌರರು, ಹಾಗೂ ಎಲ್ಲಾ ನಗರಪಾಲಿಕೆ ಸದಸ್ಯರೊಂದಿಗೆ ಕಾಮಗಾರಿಯ ಸ್ಥಳಕ್ಕೆ ದಿನಾಂಕ 23.04.2010ರ ಶುಕ್ರವಾರದಂದು ಮಧ್ಯಾಹ್ನ 3.00 ಗಂಟೆಗೆ ಭೇಟಿ ನೀಡಲು ನಿರ್ಧರಿಸಲಾಯಿತು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಮತ್ತು ಕಬಿನಿ ನೀರನ್ನು ಒಂದಕ್ಕೊಂದು ಸೇರಿಸಲಾಗುತ್ತಿದ್ದು ಮತ್ತು ಪೆರಿ ಅರ್ಬನ್ ಪ್ರದೇಶಕ್ಕೆ ಸಂಬಂಧಿಸಿದಂತೆ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಯೋಜನಾ ವರದಿಯಲ್ಲಿ ಮಾಡಿರುವ ಪ್ರಸ್ತಾವನೆಯ ಬಗ್ಗೆ ವಿವರವಾದ ಪವರ್‌ಪಾಯಿಂಟ್ ಪ್ರೆಸೆಂಟೇಷನ್ ಅನ್ನು ಮುಂದಿನ ಸಭೆಯಲ್ಲಿ ನೀಡುವುದಾಗಿ ಕಾರ್ಯಪಾಲಕ ಇಂಜಿನಿಯರ್ ಕೆಯುಡಬ್ಲ್ಯೂಎಸ್&ಡಿಬಿ ಯವರು ತಿಳಿಸಿದರು.<br><br>ಡಬ್ಲ್ಯೂ.ಟಿ.ಪಿ ಕಾಮಗಾರಿಗಳಿಗೆ ಲೆವೆಲ್‌ಗಳನ್ನು ಅಂತಿಮಗೊಳಿಸಲಾಗಿದ್ದು ಮತ್ತು ವಿನ್ಯಾಸವು ಮುಗಿದಿರುತ್ತದೆಂದು ಹಾಗೂ ಮುಂದಿನ ವಾರದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಕಾರ್ಯಪಾಲಕ ಇಂಜಿನಿಯರ್ ಕೆಯುಡಬ್ಲ್ಯೂಎಸ್&ಡಿಬಿ ಯವರು ತಿಳಿಸಿದರು. | | |
| 5 | ಮೈಸೂರು ನಗರದ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವುದು.<br><br>ಯೋಜನಾ ವೆಚ್ಚ: ರೂ 85.25 ಕೋಟಿಗಳು. ಗುತ್ತಿಗೆ ಪ್ರೀಮಿಯಂ: 17.50% ಮೇಲ್ಪಟ್ಟು (ರೂ. 108.59 ಕೋಟಿ) ಗುತ್ತಿಗೆ ಅವಧಿ: ಮಾನ್ಸೂನ್ ಬಿಟ್ಟು 18 ತಿಂಗಳು (3 ತಿಂಗಳು ಮಾನ್ಸೂನ್ ಕಾಲ) ಮುಕ್ತಾಯವಾಗಬೇಕಾದುದು Jan-2010\ | ಚರ್ಚೆಯಾಗಿರುವುದಿಲ್ಲ. | ಏಪ್ರಿಲ್ 15, 2010ರ ಅಂತ್ಯಕ್ಕೆ ನಿಗಧಿತ ಗುರಿಯಾದ ರೂ. 83.48 ಕೋಟಿಗಳ ಎದುರಾಗಿ ರೂ. 83.50 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. | |
| 6. | ಮೈಸೂರು ನಗರದ 20 ಆಯ್ದ ಕೊಳಚೆ ಪ್ರದೇಶಗಳ ಪುನರ್ ವಸತಿ ಯೋಜನೆ: ಅಂದಾಜು ವೆಚ್ಚ: **ರೂ. 45.27 ಕೋಟಿಗಳು**.<br>ಹಂತ–1<br>ಮುಕ್ತಾಯವಾಗಬೇಕಾದುದು Jan-2012 | ಕಾರ್ಯಪಾಲಕ ಇಂಜಿನಿಯರ್ ಕೆಎಸ್‌ಸಿಬಿ ರವರು ಮಾರ್ಚ್ 2010ರ ಅಂತ್ಯಕ್ಕೆ ರೂ. 47.52 ಕೋಟಿಗಳ ಎದುರಾಗಿ ರೂ. 47.75 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ತಿಳಿಸಿದರು.<br><br>ಸಭೆಯಲ್ಲಿ ಹಾಜರಿದ್ದ ಎಲ್ಲಾ ಪಾಲಿಕೆ ಸದಸ್ಯರುಗಳು, ಕಾರ್ಯಪಾಲಕ ಅಭಿಯಂತರರು ಕೆಎಸ್‌ಸಿಬಿ, ಇವರು ಸಾರ್ವಜನಿಕರ ಕುಂದುಕೊರತೆಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲವೆಂದು ತಿಳಿಸಿದರು. ಕಾರ್ಯಪಾಲಕ ಅಭಿಯಂತರರು ಸರಿಯಾಗಿ ಶ್ರಮ ವಹಿಸುತ್ತಿಲ್ಲವೆಂದು ಮತ್ತು ಪಾಲಿಕೆಯ | ಏಪ್ರಿಲ್ 15, 2010ರ ಅಂತ್ಯಕ್ಕೆ ನಿಗಧಿತ ಗುರಿಯಾದ ರೂ. 49.94 ಕೋಟಿಗಳ ಎದುರಾಗಿ ರೂ. 49.96 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.<br><br>ಶ್ರೀ ದೇವರಾಜ್, ನಗರಪಾಲಿಕೆ ಸದಸ್ಯರು ಇವರು ಕೊಳಚೆ ನಿರ್ಮೂಲನಾ ಮಂಡಳಿ ಅಧಿಕಾರಿಗಳು ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿದರು. ಈ ಮೊದಲು ಪ್ರಕಟಿಸಲಾದ ಪಟ್ಟಿಯಲ್ಲಿ ಇದ್ದ ತಾವು ನೀಡಿದ್ದ 12 ಫಲಾನುಭವಿಗಳ ಹೆಸರುಗಳನ್ನು ಈಗ ಕೈಬಿಡಲಾಗಿರುತ್ತದೆಯೆಂದು ತಿಳಿಸಿದರು. ಮತ್ತು ಇದಕ್ಕೆ ಯಾವುದೇ ಕಾರಣಗಳು ಕಂಡುಬರುತ್ತಿಲ್ಲವೆಂದು ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ನಿರ್ದೇಶನಗಳನ್ನು ಪಾಲಿಸುತ್ತಿಲ್ಲವೆಂದು ತಿಳಿಸಿದರು.<br><br>ಮನೆಗಳ ವೆಂಟಿಲೇಟರ್ಸ್ ಹಾಗೂ ಕಿಟಕಿಗಳ ನಿರ್ಮಾಣಕ್ಕೆ ಉಪಯೋಗಿಸಲಾಗಿರುವ ಸ್ಟೀಲ್ ರಾಡ್ಸ್‌ಗಳು ಉತ್ತಮ ಗುಣಮಟ್ಟದಾಗಿಲ್ಲವೆಂದು ಶ್ರೀ ಶಿವಣ್ಣ, ನಗರಪಾಲಿಕೆ ಸದಸ್ಯರವರು ತಿಳಿಸಿದರು. ಇದನ್ನು ಪರಿಶೀಲಿಸುವಂತೆ ಅಧೀಕ್ಷಕ ಅಭಿಯಂತರರವರಿಗೆ ಆಯುಕ್ತರು, ಮೈಸೂರು ನಗರಪಾಲಿಕೆಯವರು ಸೂಚಿಸಿದರು.<br><br>ಇದಕ್ಕೂ ಮೊದಲ ಯೋಜನೆಗಳಲ್ಲಿ ಸ್ಲಂ ನಿವಾಸಿಗಳಿಗೆ ಹಂಚಿಕೆ ಮಾಡಲಾದ ಮನೆಗಳನ್ನು ಅವರುಗಳು ಬಾಡಿಗೆಗೆ ಕೊಟ್ಟಿರುತ್ತಾರೆ. ಅದು ಮತ್ತೊಮ್ಮೆ ನರ್ಮ್ ಯೋಜನೆ ಅಡಿಯಲ್ಲಿ ಮರುಕಳಿಸಬಾರದೆಂದು ತಿಳಿಸಿದರು. ನೈಜವಾದ ಫಲಾನುಭವಿಗಳನ್ನು ಗುರುತಿಸಿ ಅವರುಗಳಿಗೆ ಮನೆಗಳನ್ನು ಹಂಚಿಕೆ ಮಾಡಬೇಕಾಗಿ ಹಾಗೂ ಬಾಡಿಗೆಗೆ ಕೊಟ್ಟಿರುವ ನಿವಾಸಿಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು ಅಂಥವರಿಗೆ, ಹಂಚಿಕೆ ಮಾಡಲಾದ ಮನೆಗಳನ್ನು ರದ್ದುಗೊಳಿಸಬೇಕು ಎಂದು ಶ್ರೀ ಸೋಮಶೇಖರ್, ಪಾಲಿಕೆ ಸದಸ್ಯರವರು ತಿಳಿಸಿದರು.<br><br>ಆರ್.ಎಂ.ಸಿ ಯಾರ್ಡ್‌ನ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿದೆ ಹಾಗೂ 14 ಸ್ಲಂ ನಿವಾಸಿಗಳ ಲಿಸ್ಟ್‌ಅನ್ನು ಕಾರ್ಯಪಾಲಕ ಅಭಿಯಂತರರು, ಕೆಎಸ್‌ಸಿಬಿರವರಿಗೆ ಫಲಾನುಭವಿಗಳ ಲಿಸ್ಟ್‌ನಲ್ಲಿ ಸೇರಿಸಲು ನೀಡಲಾಗಿತ್ತು ಆದರೆ ಅವುಗಳನ್ನು ಸೇರಿಸಲಾಗಿಲ್ಲವೆಂದು ಶ್ರೀ ದೇವರಾಜು, ಪಾಲಿಕೆ ಸದಸ್ಯರವರು ತಿಳಿಸಿದರು.<br><br>ಉತ್ತರವಾಗಿ, ಕಾರ್ಯಪಾಲಕ ಇಂಜಿನಿಯರ್, ಕೆಎಸ್‌ಸಿಬಿ ರವರು ಮಂದಗತಿಯಲ್ಲಿ ಸಾಗುತ್ತಿರುವ ಕಾಮಗಾರಿಯ ಗುತ್ತಿಗೆದಾರರಿಗೆ ನೋಟೀಸ್‌ಅನ್ನು ರವಾನಿಸಲಾಗಿದೆ ಎಂದು ತಿಳಿಸಿದರು. ಆಯುಕ್ತರು ಮೈಸೂರು ಮಹಾನಗರ ಪಾಲಿಕೆಯವರು ಪ್ರಗತಿಯನ್ನು ಚುರುಕುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಮತ್ತು ಶೀಘ್ರವಾಗಿ ಸಾರ್ವಜನಿಕ ವಿಚಾರಣೆಯನ್ನು ನಡೆಸಲು ವ್ಯವಸ್ಥೆ | ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್‌ರವರು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿಲ್ಲವೆಂದು ಮತ್ತು ಕೊಳಚೆ ನಿರ್ಮೂಲನಾ ಮಂಡಳಿ ಅಧಿಕಾರಿಗಳು ತಮ್ಮ ಇಚ್ಛೆಗೆ ಅನುಸಾರವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿರುತ್ತಾರೆಂದು ತಿಳಿಸಿದರು. ಇದಕ್ಕೆ ಉತ್ತರವಾಗಿ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ಇವರು ಫಲಾನುಭವಿಗಳ ಪಟ್ಟಿಯನ್ನು ಪಾಲಿಕೆ ಕೌನ್ಸಿಲ್ ಸಮ್ಮತಿಯೊಂದಿಗೆ ಅಂತಿಮಗೊಳಿಸಲಾಗುವುದೆಂದು ತಿಳಿಸಿದರು ಮತ್ತು ಫಲಾನುಭವಿಗಳ ಆಯ್ಕೆಯನ್ನು ಪಾರದರ್ಶಕವಾಗಿ ಮಾಡಲಾಗುವುದೆಂದು ಭರವಸೆ ನೀಡಿದರು.<br><br>ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಿಸಲಾಗುತ್ತಿರುವ ಮನೆಗಳಲ್ಲಿ ಚಿಮಣಿಗಳನ್ನು ಅಳವಡಿಸಲು ಯಾವುದೇ ಅವಕಾಶ ಮಾಡಿರುವುದಿಲ್ಲವೆಂದು ಶ್ರೀ ಕುಮಾರ್, ನಾಗರೀಕ ಸಮಿತಿ ಮುಖಂಡರು ಇವರು ತಿಳಿಸಿದರು. ಮುಂದಿನ ಯೋಜನೆಗಳಲ್ಲಿ ಇದನ್ನು ಸರಿಪಡಿಸುವುದಾಗಿ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಮಾಡಲು ಸೂಚಿಸಲಾಯಿತು. ತಪ್ಪಿದ್ದಲ್ಲಿ, ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಗಂಭೀರವಾಗಿ ಕ್ರಮ ಜರುಗಿಸಲಾಗುವುದೆಂದು ತಿಳಿಸಿದರು.<br><br>ಫಲಾನುಭವಿಗಳನ್ನು ಗುರುತಿಸಲು ಹಾಗೂ ಮನೆಗಳನ್ನು ಹಂಚಿಕೆ ಮಾಡಲು ಮಾನ್ಯ ಆಯುಕ್ತರು, ಕೆಎಸ್‌ಸಿಬಿಯವರ ಉಪಸ್ಥಿತಿ ಅವಶ್ಯ ಇರುವುದರಿಂದ, ಮುಂದಿನ ಸಭೆಗೆ ತಪ್ಪದೆ ಹಾಜರಾಗುವಂತೆ ಮಾನ್ಯ ಆಯುಕ್ತರು, ಕೆಎಸ್‌ಸಿಬಿ ಇವರಿಗೆ ಕೋರಲು ಮಾನ್ಯ ಆಯುಕ್ತರು ನಗರಪಾಲಿಕೆಯವರು ಸೂಚಿಸಿದರು. | | |
| 7. | ಮೈಸೂರು ನಗರದ 46 ಕೊಳಚೆ ಪ್ರದೇಶಗಳ ಪುನರ್‌ವಸತೆ ಅನುಷ್ಠಾನಗೋಳಿಸುವ ಸಂಸ್ಥೆ: ಕರ್ನಾತಕ ಕೊಳಚೆ ನಿರ್ಮೂಲನ ಮಂಡಳಿ ಅಂದಾಜು ವೆಚ್ಚ: **ರೂ.90.93 ಕೋಟಿಗಳು.** | ಮಾರ್ಚ್ 2010ರ ಅಂತ್ಯಕ್ಕೆ ನಿಗದಿಯಾಗಿರುವ ರೂ. 14.60 ಕೋಟಿಗಳ ಎದುರಾಗಿ ರೂ. 14.98 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್ ಕೆ.ಯು.ಡಬ್ಲ್ಯೂ.ಎಸ್ & ಡಿಬಿ ರವರು ತಿಳಿಸಿದರು. ಪ್ರಗತಿಯು ನಿಗಧಿತ ಗುರಿಯಂತೆ ಇರುತ್ತದೆ. | ಏಪ್ರಿಲ್ 15, 2010ರ ಅಂತ್ಯಕ್ಕೆ ನಿಗಧಿತ ಗುರಿಯಾದ ರೂ. 15.51 ಕೋಟಿಗಳ ಎದುರಾಗಿ ರೂ. 15.52 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. | |
| 8. | ಏಕಲವ್ಯ ನಗರದಲ್ಲಿ ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ದಿ ಯೋಜನೆ:<br><br>ಯೋಜನಾ ವೆಚ್ಚ.<br><br>ರೂ. 47.78 ಕೋಟಿಗಳು. | ಆರ್ಥಿಕ ಬಿಡ್‌ಅನ್ನು 9ನೇ ಏಪ್ರಿಲ್ 2010ರಂದು ತೆರೆಯಲಾಗುವುದೆಂದು ಕಾರ್ಯಪಾಲಕ ಅಭಿಯಂತರರು, ಕೆಎಸ್‌ಸಿಬಿಯವರು ತಿಳಿಸಿದರು. | | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| 9. | **1.**ಮೈಸೂರು–ಬೆಂಗಳೂರು ರಸ್ತೆಯಿಂದ ಮೈಸೂರು–ನಚಿಜನಗೂಡುವರೆಗೆ 2 ಪಥದ ಹ್ರೆರ ವರ್ತುಲದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ್ವದು (0+0.25 ಕಿ.ಮಿ ಪಶ್ಚಿಮದ ಕಡೆಗೆ) 2. ಮೈಸೂರು–ಬೆಂಗಳೂರು ಹೊರ ವರ್ತುಲ ರಸ್ತೆಯಿಂದ ಮೈಸೂರು – ಬನ್ನೂರು ರಸ್ತೆವರೆಗೆ 4 ಪಥದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0 ಯಿಚಿದ 7.49ಕಿ.ಮಿ ಪೂರ್ವದ ಕಡೆಗೆ)<br><br>ಅಚಿದಾಜು ವೆಚ್ಚ: ರೂ. 219.03 ಕೋಟಿಗಳು. ಅನುಮೋದಿಸಿದ ದಿ:15.02.08 | ಸರ್ಕಾರದಿಂದ ಅನುಮೋದನೆ ಬಂದಿದ್ದು ಗುತ್ತಿಗೆದಾರರಿಗೆ ಒಪ್ಪಿಗೆ ಪತ್ರವನ್ನು ನೀಡಿರುವುದಾಗಿ ಆಯುಕ್ತರು, ಮೂಡಾರವರು ತಿಳಿಸಿದರು. ಪ್ರಾಥಮಿಕ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ತಿಳಿಸಿದರು.<br><br>ಜೆ.ಪಿ ನಗರದಲ್ಲಿ ಹಾಲಿ ಇರುವ ರಿಂಗ್ ರೋಡ್‌ಅನ್ನು ಅಗಲಗೊಳಿಸಲಾಗಿದ್ದು ಹಾಗೂ ರಸ್ತೆಯ ಮಟ್ಟವನ್ನು ಎತ್ತರಗೊಳಿಸಲಾಗಿರುವುದರಿಂದ ಒಳ ಚರಂಡಿಯಲ್ಲಿ ತೊಂದರೆ ಉಂಟಾಗಿದೆಯೆಂದು ಶ್ರೀ ಭೈರಪ್ಪ, ಪಾಲಿಕೆ ಸದಸ್ಯರವರು ತಿಳಿಸಿದರು.<br><br>ಈ ಸಂಬಂಧ ಇದನ್ನು ಪರಿಶೀಲಿಸಿ ವರದಿ ನೀಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೂಡಾ ಇವರಿಗೆ ಸೂಚಿಸಲಾಯಿತು.<br><br>ರೈಲ್ವೆ ಕೆಳ ಸೇತುವೆಗೆ ಸಂಬಂಧಿಸಿದಂತೆ ರೈಟ್ಸ್ ಅವರಿಂದ ಜನರಲ್ ಅಲೈನ್‌ಮೆಂಟ್ ಡ್ರಾಯಿಂಗ್ ಬಂದಿರುವುದಾಗಿ ತಿಳಿಸಿದರು.<br><br>ಬಿಟ್ಟು ಹೋಗಿರುವ ಸರಪಳಿಗಳಿಗೆ ಸಂಬಂಧಿಸಿದಂತೆ ಯೋಜನಾ ವರದಿ ತಯಾರಿಸಲು Expression of Interest ಕರೆಯಲಾಗಿದ್ದು ಎರಡು ತಿಂಗಳ ಒಳಗಾಗಿ ಯೋಜನಾ ವರದಿಯನ್ನು ತಯಾರಿಸುವುದಾಗಿ ಆಯುಕ್ತರು, ಮೂಡಾ ಇವರು ತಿಳಿಸಿದರು. ಯೋಜನಾ ವರದಿ ತಯಾರಿಸಿದ ನಂತರ ನರ್ಮ್ ಅಥವಾ ಮೂಡಾ ಅನುದಾನದಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು. | ಮೇ ಮೊದಲನೆವಾರದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸುವುದಾಗಿ ಅಧೀಕ್ಷಕ ಇಂಜಿನಿಯರ್ ಮೂಡಾ ಇವರು ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| 10. | ದೊಡ್ಡ ಮಳೆನೀರು ಚರಂಡಿ ಪುನರ್ ನಿರ್ಮಾಣ.<br>ಅಂದಾಜು ಮೊತ್ತ: ರೂ 384.60 ಕೋಟಿಗಳು (ಸದ್ಯಕ್ಕೆ ರೂ 125.00 ಕೋಟಿಗೆ ಮಿತಿಗೊಳಿಸಲಾಗಿದೆ)<br>ಮುಕ್ತಾಯವಾಗಬೇಕಾದುದು<br>ಡಿಸೆಂಬರ್ 2011. | ದೊಡ್ಡ ಮಳೆ ನೀರು ಚರಂಡಿ ಕಾಮಗಾರಿಗೆ ಸಂಬಂಧಿಸಿದಂತೆ ಚರಂಡಿ ನೀರನ್ನು ಕಾಮಗಾರಿಯಲ್ಲಿ ಉಪಯೋಗಿಸುತ್ತಿರುವ ಬಗ್ಗೆ ಮಾಹಿತಿಯನ್ನು ಪಾಲಿಕೆಯ ಗಮನಕ್ಕೆ ತಂದಿರುವುದಕ್ಕೆ ಮಾಧ್ಯಮ ಪ್ರತಿನಿಧಿಗಳಿಗೆ ಅಧೀಕ್ಷಕ ಅಭಿಯಂತರರು, ನರ್ಮ್‌ರವರು ಧನ್ಯವಾದಗಳನ್ನು ತಿಳಿಸಿದರು.<br>ಕಾಮಗಾರಿಯಲ್ಲಿ ಚರಂಡಿ ನೀರನ್ನು ಉಪಯೋಗಿಸುತ್ತಿರುವ ಬಗ್ಗೆ ವರದಿ ಮಾಡಲಾಗಿರುತ್ತದೆ ಸದರಿ ಕಾಮಗಾರಿ ಸ್ಥಳವನ್ನು ಪರಿವೀಕ್ಷಿಸಿ ಆ ದಿನ ನಿರ್ವಹಿಸಲಾದ ಕಾಮಗಾರಿ ಭಾಗವನ್ನು ತೆಗೆದು ಹಾಕುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದ್ದು ಮತ್ತು ಅದರಂತೆ ಆ ಭಾಗವನ್ನು ತೆಗೆದು ಹಾಕಿಸಲಾಗಿರುತ್ತದೆ ಎಂದು ತಿಳಿಸಿದರು. ಮುಂದುವರೆದು ಈ ವಾರ್ಡಿನ ಪಾಲಿಕೆ ಸದಸ್ಯರಾದ ಶ್ರೀ ದೇವರಾಜ್, ಅವರು ಸದರಿ ಭಾಗದ ಕಾಮಗಾರಿಯನ್ನು ಮೊದಲಿನಿಂದ ತಾವು ನೋಡುತ್ತಿದ್ದು ಮತ್ತು ಸೋಮವಾರದಂದು ನಿರ್ವಹಿಸಿದ ಸುಮಾರು 15 ಮೀ. ನಷ್ಟು ಕಾಮಗಾರಿಯನ್ನು ಹೊರತು ಪಡಿಸಿ ಉಳಿದ ಎಲ್ಲಾ ಕಾಮಗಾರಿಗೆ ಶುದ್ಧವಾದ ನೀರನ್ನು ಉಪಯೋಗಿಸುತ್ತಿರುವುದನ್ನು ಗಮನಿಸಿರುವುದಾಗಿ ತಿಳಿಸಿದರು.<br>ಪೂಜ್ಯ ಮಹಾಪೌರರು ಹಾಗೂ ಪಾಲಿಕೆ ಸದಸ್ಯರುಗಳು ಅಂತಹ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಮತ್ತು ಸೂಕ್ತ ದಂಡವನ್ನು ವಿಧಿಸುವಂತೆ ಸೂಚಿಸಿದರು. | ಏಪ್ರಿಲ್ 15, 2010ರ ಅಂತ್ಯಕ್ಕೆ ನಿಗಧಿತ ಗುರಿಯಾದ ರೂ. 26.25 ಕೋಟಿಗಳ ಎದುರಾಗಿ ರೂ. 27.29 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. | |
| 11. | ಘನತ್ಯಾಜ್ಯ ವಸ್ತು ನಿರ್ವಹಣೆ: ಮೈಸೂರು ನಗರದಲ್ಲಿ ಸಮಗ್ರ ಮುನ್ಸಿಪಲ್ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ಲಾಂಟ್ ಅಭಿವೃದ್ಧಿ ಪಡಿಸುವುದು.<br>**ಅನುಮೋದಿತ ದಿ: 19-12-2008**<br>ಯೋಜನೆಯ ಮೊತ್ತ ರೂ. 29.98 ಕೋಟಿ<br>ಮುಕ್ತಾಯವಾಗಬೇಕಾದುದು ಜೂನ್ 2010. | ಲ್ಯಾಂಡ್‌ಫಿಲ್ ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್‌ಗಳನ್ನು ತೆರೆಯಲಾಗಿದ್ದು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರನ್ನು ದಿನಾಂಕ 07.04.2010 ರಂದು ಸಂಧಾನಕ್ಕೆ ಕರೆಯಲಾಗಿದ್ದು ಸಂಧಾನದ ನಂತರ ಟೆಂಡರ್‌ಅನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದೆಂದು ಅಧೀಕ್ಷಕ ಅಭಿಯಂತರರು, ನರ್ಮ್‌ರವರು ತಿಳಿಸಿದರು. | ಏಪ್ರಿಲ್ 15, 2010ರ ಅಂತ್ಯಕ್ಕೆ ನಿಗಧಿತ ಗುರಿಯಾದ ರೂ. 6.29 ಕೋಟಿಗಳ ಎದುರಾಗಿ ರೂ. 6.09 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ.<br>ಆರ್ಥಿಕ ಪ್ರಗತಿಯಲ್ಲಿ ಕುಂಠಿತ ಇರುವುದರ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ಅಸಮಧಾನವನ್ನು ವ್ಯಕ್ತಪಡಿಸಿದರು. ಮತ್ತು ಮುಂದಿನ ತಿಂಗಳಿನಲ್ಲಿ ಪ್ರಗತಿಯನ್ನು ಸರಿದೂಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಅಧೀಕ್ಷಕ ಇಂಜಿನಿಯರ್ ನರ್ಮ್ ಇವರಿಗೆ ತಿಳಿಸಿದರು.<br>ಘನತ್ಯಾಜ್ಯ ಸಂಗ್ರಹಣೆ ಅಂಗಳದಲ್ಲಿ ಬೆಂಕಿಯನ್ನು ತಡೆಗಟ್ಟಲು ಯಾವುದೇ ಸೂಕ್ತವಾದ ಕ್ರಮವನ್ನು | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | | ತೆಗೆದುಕೊಳ್ಳುತ್ತಿಲ್ಲವೆಂದು ಶ್ರೀ ಭೈರಪ್ಪ ನಗರಪಾಲಿಕೆ ಸದಸ್ಯರು ಇವರು ತಿಳಿಸಿದರು.<br>ಈ ಸಂಬಂಧ ಯಾವುದೇ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳಲು ವಿಫಲವಾಗಿರುವ ಸಹಾಯಕ ಆಯುಕ್ತರು ವಲಯ ಕಛೇರಿ–2 ಇವರಿಗೆ ನೋಟಿಸ್ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ನಿರ್ದೇಶನ ನೀಡಿದರು.<br>ಘನತ್ಯಾಜ್ಯ ಸಂಗ್ರಹಣೆ ಅಂಗಳದಲ್ಲಿ ಸ್ಥಿರವಾಗಿ ಬೆಂಕಿಯನ್ನು ತಡೆಗಟ್ಟಲು ತಯಾರಿಸಿರುವ ಪ್ರಸ್ತಾವನೆಗಳ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ವಿಚಾರಿಸಿದರು. ಮತ್ತು ಇದಕ್ಕೆ ಜವಾಬ್ದಾರರಾದ ಪರಿಸರ ಇಂಜಿನಿಯರ್‌ಗಳನ್ನು ಮುಂದಿನ ಸಭೆಯಲ್ಲಿ ಪ್ರಸ್ತಾವನೆಗಳ ಬಗ್ಗೆ ತಪ್ಪದೆ ಪಾವರ್ ಪಾಯಿಂಟ್ ಪ್ರಸ್ಂಟೇಷನ್ ನೀಡಲು ಸೂಚಿಸಿದರು. | |
| 12. | ಮೈಸೂರು ನಗರದ ಪಾರಂಪರಿಕ ಕಟ್ಟಡಗಳು ಹಾಗೂ ವೃತ್ತಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು.<br>ಯೋಜನೆಯ ಮೊತ್ತ ರೂ. 39.45 ಕೋಟಿ | ದಿನಾಂಕ 06.04.2010ರಂದು ಸ್ಟೂಪ್ ಕನ್ಸಲ್ಟೆಂಟ್ಸ್ ಅವರಿಂದ ಅಂದಾಜುಗಳನ್ನು ಸ್ವೀಕರಿಸಲಾದ್ದು ಅದನ್ನು ಪರಿಶೀಲಿಸಲಾಗುತ್ತಿದೆ ಎಂದು ಅಧೀಕ್ಷಕ ಅಭಿಯಂತರರು, ನರ್ಮ್‌ರವರು ತಿಳಿಸಿದರು.<br>ಸ್ಟೇಕ್ ಹೋಲ್ಡರ್ಸ್ ಕಮಿಟಿಯನ್ನು ರಚಿಸಲಾಗಿರುವುದಿಲ್ಲವೆಂದು ಶ್ರೀ ಮಧುಕರ್, ಹಾರ್ಸ್ ರಿವೈವಲ್ ಪ್ರಾಜೆಕ್ಟ್ ಇದರ ಪ್ರತಿನಿಧಿಯವರು ತಿಳಿಸಿದರು. ಕಾಮಗಾರಿಯನ್ನು ಪಾಲಿಕೆ ವತಿಯಿಂದ ನಿರ್ವಹಿಸುವ ಬಗ್ಗೆ ಸರ್ಕಾರದಿಂದ ಆದೇಶ ಬಂದ ನಂತರ ಸಮಿತಿಯನ್ನು ರಚಿಸಲಾಗುವುದೆಂದು ಆಯುಕ್ತರವರು ತಿಳಿಸಿದರು.<br>ಸರ್ಕಾರಕ್ಕೆ ಸಲ್ಲಿಸಲಾಗಿರುವ ಪಾರಂಪಾರಿಕ ಯೋಜನಾ ವರದಿಯಲ್ಲಿ ಟಾಂಗಗಳನ್ನು ಸಾರೋಟು ಗಾಡಿಗಳನ್ನಾಗಿ ಬದಲಾಯಿಸುವ ಬಗ್ಗೆ ಪ್ರಸ್ತಾವನೆ ಇರುವುದಾಗಿ ಆಯುಕ್ತರು ಮೈಸೂರು ಮಹಾನಗರಪಾಲಿಕೆ ಇವರು ತಿಳಿಸಿದರು. | ಸ್ಟೇಕ್ ಹೋಲ್ಡರ್ಸ್ ಕಮಿಟಿಯನ್ನು ರಚಿಸಲಾಗಿರುವುದಿಲ್ಲವೆಂದು ಶ್ರೀ ಮಧುಕರ್, ಹಾರ್ಸ್ ರಿವೈವಲ್ ಪ್ರಾಜೆಕ್ಟ್ ಇವರು ತಿಳಿಸಿದರು. ಇದಕ್ಕೆ ಉತ್ತರವಾಗಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ಇವರು ಕಮಿಟಿಯನ್ನು ರಚಿಸಲು ಸೂಕ್ತ ವ್ಯವಸ್ಥೆ ಮಾಡುವಂತೆ ಸೂಚಿಸಿದರು. | |
| 13 | ಇ.ಡಬ್ಲ್ಯೂ.ಎಸ್. ಮನೆಗಳು ಮತ್ತು ಮೂಲಭೂತ ಅಭಿವೃದ್ಧಿ ಪ್ರಾಧಿಕಾರ ಲಿಮೆಟೆಡ್. ಬಿ.ಎಸ್.ಯು.ಪಿ. ಅಡಿಯಲ್ಲಿ ಯೋಜನೆಚಿು ಮೊತ್ತ ರೂ. | | | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | 52.35 ಕೋಟಿ ಮುಕ್ತಾಯವಾಗಬೇಕಾದ ದಿನಾಂಕ: | | | |

**ಸಾಮಾನ್ಯ ಚರ್ಚೆಗಳು :**

- ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ಇವರು ಎಲ್ಲಾ ಅನುಷ್ಠಾನ ಅಧಿಕಾರಿಗಳಿಗೆ ಕಾಮಗಾರಿಗಳ ಗುಣಮಟ್ಟ ತಪಾಸಣೆ ನಡೆಸುತ್ತಿರುವ 3ನೇ ಸಂಸ್ಥೆಯವರನ್ನು ಮುಂದಿನ ಸಭೆಗೆ ಹಾಜರಾಗಲು ಆಹ್ವಾನಿಸುವಂತೆ ಮತ್ತು ಗುಣಮಟ್ಟಗಳ ಬಗ್ಗೆ 3ನೇ ಸಂಸ್ಥೆಯ ಪರೀಕ್ಷಾ ವರದಿಗಳನ್ನು ಸಾರ್ವಜನಿಕರಿಗೆ ನೀಡುವಂತೆ ಸೂಚಿಸಿದರು.

- ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ಇವರು ನರ್ಮ್ ಯೋಜನೆ ಬಗ್ಗೆ ಸರಿಯಾದ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡುವಂತೆ ಎಲ್ಲಾ ಮಾಧ್ಯಮ ಪ್ರತಿನಿಧಿಗಳಿಗೆ ಕೋರಿದರು.

- ಶ್ರೀ ಶೀಕಂಠಯ್ಯ, ಮಹಾನಗರ ಪಾಲಿಕೆ ಸದಸ್ಯರು ಇವರು ನರ್ಮ್ ಯೋಜನೆಯಡಿಯಲ್ಲಿ ಒಟ್ಟಾರೆಯಾಗಿ ರೂ. 361.00 ಕೋಟಿಗಳ ಆರ್ಥಿಕ ವೆಚ್ಚವಾಗಿದ್ದರೂ, ಯಾವುದೇ ಗಣನಿಯವಾಗಿ ಭೌತಿಕ ಪ್ರಗತಿ ಕಂಡುಬರುತ್ತಿಲ್ಲವೆಂದು ತಿಳಿಸಿದರು. ಇದಕ್ಕೆ ಉತ್ತರವಾಗಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ಇವರು ಯೋಜನೆಯು ಮುಖ್ಯವಾಗಿ ಸಿವಿಲ್ ಕಾಮಗಾರಿಗಳನ್ನು ಒಳಗೊಂಡಿದ್ದು, ಇದಕ್ಕೆ ಸಾಕಷ್ಟು ಕಾಲವಕಾಶದ ಅವಶ್ಯಕತೆ ಇದೆ ಎಂದು ತಿಳಿಸಿದರು. ಮತ್ತು ನೀರು ಸರಬರಾಜು ಯೋಜನೆ, ಮನೆಗಳ ನಿರ್ಮಾಣ ಯೋಜನೆ, ಮತ್ತು ಕೆ.ಎಸ್.ಆರ್.ಟಿ.ಸಿ. ಯೋಜನೆಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ ಎಂದು ತಿಳಿಸಿದರು. ನರ್ಮ್ ಯೋಜನೆಯಡಿಯಲ್ಲಿ ಬರುವ ಎಲ್ಲಾ ಕಾಮಗಾರಿಗಳನ್ನು ನಿಗಧಿತ ಅವಧಿಯಾದ ಡಿಸೆಂಬರ್ 2012 ಒಳಗೆ ಪೂರ್ಣಗೊಳಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ, ಎಲ್ಲರಿಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಮಾನ್ಯ ಜಿಲ್ಲಾಧಿಕಾರಿಗಳು, ಹಾಗೂ**
**ವಿಶೇಷಾಧಿಕಾರಿಗಳು ಜೆಎನ್‌ನರ್ಮ್**
**ಮೈಸೂರು ಜಿಲ್ಲೆ,**
**ಮೈಸೂರು**

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ :**

1. ಮಾನ್ಯ ಮುಖ್ಯ ಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹಾಗೂ ವಿದಾನಸಭೆಯ ಸದಸ್ಯರು, ಕೃಷ್ಣರಾಜ ಕ್ಷೇತ್ರ, ಮೈಸೂರು.
2. ಮಾನ್ಯ ಲೋಕಸಭಾ ಸದಸ್ಯರು, ಮೈಸೂರು ಕ್ಷೇತ್ರ, ಮೈಸೂರು.
3. ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಮೈಸೂರು.
4. ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ ಕ್ಷೇತ್ರ, ಮೈಸೂರು.
5. ಮಾನ್ಯ, ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು.
6. ಶ್ರೀ ಡಿ. ಪದ್ಮನಾಭ, ಅಧ್ಯಕ್ಷರು, ಛೇರ್‌ಮೆನ್, ಜಿಲ್ಲಾ ಪ್ಲಾನಿಂಗ್ ಕಮಿಟಿ, ಮೈಸೂರು.
7. ಶ್ರೀ ಹೆಚ್.ಎನ್.ಶ್ರೀಕಂತಯ್ಯ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
8. ಶ್ರೀ ಬಿ.ಎಲ್.ಭೈರಪ್ಪ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
9. ಶ್ರೀ ಎಂ.ಜಯಶಂಕರಸ್ವಾಮಿ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ಮೈಸೂರು.
10. ಮಾನ್ಯ ಮಹಾಪೌರರು, ಮೈಸೂರು ನಗರಪಾಲಿಕೆ, ಮೈಸೂರು.
11. ಮಾನ್ಯ ಉಪ ಮಹಾ ಪೌರರು, ಮೈಸೂರು ನಗರಪಾಲಿಕೆ, ಮೈಸೂರು.
12. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
14. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
15. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ಸಿಲ್ವರ್ ಜ್ಯುಬಲಿ ಬ್ಲಾಕ್, 2ನೇ ಮಹಡಿ, Unity ಕಟ್ಟಡ, 3ನೇ ಅಡ್ಡರಸ್ತೆ, ಮಿಷನ್ ರಸ್ತೆ, ಬೆಂಗಳೂರು.
16. ವ್ಯವಸ್ಥಾಪಕ ನಿರ್ದೇಶಕರು, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಂ. 6, ಜಲಭವನ, 1ನೇ ಹಂತ, 1ನೇ ಸ್ಟೇಜ್, ಬಿ.ಟಿ.ಎಂ. ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560029.
17. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿ., ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆ, ಶಾಂತಿನಗರ, ಬೆಂಗಳೂರು.
18. ಆಯುಕ್ತರು, ಪಾರಾಂಪರಿಕ ಇಲಾಖೆ, ಅರ್ಕ್ಯಾಲಜಿ ಮ್ಯೂಸಿಯಂ ಮತ್ತು ಪಾರಂಪರಿಕ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ್ಬಾ ರಸ್ತೆ, ಬೆಂಗಳೂರು.19.
19. ಆಯುಕ್ತರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,ಬೆಂಗಳೂರು – 1.

**II. <u>ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.</u>**

1. ಆಯುಕ್ತರು, ಮೈಸೂರು ನಗರಪಾಲಿಕೆ, ಮೈಸೂರು.
2. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
3. ಆಯುಕ್ತರು, ಕೊಳಚೆ ನಿರ್ಮೂಲನ ಮಂಡಳಿ, ಶೇಷಾದ್ರಿಪುರಂ, ಬೆಂಗಳೂರು.
4. ಯೋಜನಾ ನಿರ್ದೇಶಕರು, ಡಿಯುಡಿಸಿ, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು.
5. ಉಪ ವಿಭಾಗಾಧಿಕಾರಿಗಳು, ಮೈಸೂರು.
6. ಅಧೀಕ್ಷಕ ಇಂಜಿನಿಯರ್, ಮೈಸೂರು ನಗರಪಾಲಿಕೆ, ಮೈಸೂರು.
7. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿ., ಮೈಸೂರು.
8. ಕಾರ್ಯಪಾಲಕ ಇಂಜಿನಿಯರ್, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಗರವಿಭಾಗ (ಜೆಎನ್ ನರ್ಮ್) ಯಾದವಗಿರಿ, ಮೈಸೂರು.
9. ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಮೈಸೂರು.
10. ಕಾರ್ಯಪಾಲಕ ಇಂಜಿನಿಯರ್, ಕ.ರಾ.ರ.ಸಾ.ನಿ.,, ಮೈಸೂರು ಗ್ರಾಮಾಂತರ ವಿಭಾಗ, ಬನ್ನಿಮಂಟಪ, ಮೈಸೂರು.
11. ಉಪ ನಿರ್ದೇಶಕರು, ಪಾರಂಪರಿಕ ಇಲಾಖೆ, ಮೈಸೂರು.
12. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.

**ಮಾನ್ಯ ಜಿಲ್ಲಾಧಿಕಾರಿಗಳು, ಹಾಗೂ**
**ವಿಶೇಷಾಧಿಕಾರಿಗಳು ಜೆಎನ್‌ನರ್ಮ್**
**ಮೈಸೂರು ಜಿಲ್ಲೆ,**
**ಮೈಸೂರು**